**ದಿಃ15-09-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರಿಂದಃ**

7. ದಾವಾ ಅನುಸೂಚಿತ 4 ರಿಂದ 7 ಕಂಡಿಕೆಯ ಸ್ವತ್ತುಗಳು ನನ್ನ ತಂದೆಗೆ ಆತನ ತಂದೆಯಿಂದ ಅಥವಾ ನನ್ನ ತಂದೆಯ ಅಜ್ಜನಿಂದ ಬಂದಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ ಪಹಣಿಗಳನ್ನು ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಪಹಣಿಗಳನ್ನು ಹೊರತುಪಡಿಸಿ ಇತರೆ ಯಾವುದೇ ದಾಖಲಾತಿಗಳನ್ನು ನೀಡಿಲ್ಲ ಎಂದರೆ ಸರಿ . ಪ್ರತಿವಾದಿಯರು ಪಿತ್ರಾರ್ಜಿತ ಸ್ವತ್ತುಗಳಿಂದ ಬಂದಂತಹ ಆದಾಯದಿಂದ ಇತರೆ ಸ್ವತ್ತುಗಳನ್ನು ಖರೀದಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಪಿತ್ರಾರ್ಜಿತ ಸ್ವತ್ತುಗಳನ್ನು ಚನ್ನಗಿರಿ ತಾಲ್ಲೂಕಿನ ವ್ಯಾಪ್ತಿಗೆ ಒಳಪಟ್ಟಿದ್ದು ಹೊಳಲ್ಕೆರೆ ತಾಲ್ಲೂಕಿನ ವ್ಯಾಪ್ತಿಗೆ ಒಳಪಟ್ಟಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೆ ಹೊಳಲ್ಕೆರೆ ತಾಲ್ಲೂಕಿನಲ್ಲಿ ಯಾವುದೇ ಪಿತ್ರಾರ್ಜಿತ ಸ್ವತ್ತುಗಳು ಇಲ್ಲದಿದ್ದಾಗ್ಯೂ ಉದ್ದೇಶಪೂರ್ವಕವಾಗಿ ಈ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಜಯಪ್ಪರವರು ನನ್ನ ತಂದೆಯಾಗಬೇಕು. ನನ್ನ ತಂದೆಗೆ 10 ವರ್ಷಗಳ ಹಿಂದೆ ಅಪಘಾತ ಏರ್ಪಟ್ಟಿದ್ದು, ಹಾಗಾಗಿ ಅವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ ಎಂದರೆ ಸರಿ.

8. ನನ್ನ ತಂದೆ ಇಂದಿಗೂ ಸಹ ಮಣಿಪಾಲ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆಯುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಯಾವುದೇ ಕೆಲಸವನ್ನು ಮಾಡಲು ಆಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾವು ನಮ್ಮ ತಂದೆಯನ್ನು ಬಿಟ್ಟು ಹೋದ ಕಾರಣ ನನ್ನ ತಂದೆ ಇತರೆ ಪ್ರತಿವಾದಿಯರ ಆಶ್ರಯದಲ್ಲಿ ಇದ್ದಾರೆ ಎಂದರೆ ಸಾಕ್ಷಿ ನನ್ನ ತಂದೆಗೆ ಸೇರಿದ ಆಸ್ತಿಯನ್ನು ಇತರೆ ಪ್ರತಿವಾದಿಯರು ಅನುಭವಿಸುತ್ತಿದ್ದು, ಹಾಗಾಗಿ ನನ್ನ ತಂದೆಯನ್ನು ನೋಡಿಕೊಳ್ಳುತ್ತಿದ್ದಾರೆ ಎನ್ನುತ್ತಾರೆ. ದಿನಾಂಕ 18.10.2020 ರಂದು ನನ್ನ ತಂದೆ ಮತ್ತು ಆತನ ಸಹೋದರಿಯರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಮಾಡಿಕೊಂಡಿರುತ್ತಾರೆ, ಆದರೆ ಅದರ ಬಗ್ಗೆ ನಮಗೆ ನಂತರ ತಿಳಿದಿರುತ್ತದೆ ಎಂದು ಹೇಳುತ್ತಾರೆ. ಈ ಮೇಲ್ಕಂಡಂತೆ ವಿಭಾಗ ಮಾಡಿಕೊಂಡಿರುವ ಕಾರಣ ಪ್ರತಿವಾದಿಯರ ಕುಟುಂಬ ಒಟ್ಟು ಕುಟುಂಬ ಅಲ್ಲ ಎಂದರೆ ನನಗೆ ಗೊತ್ತಿಲ್ಲ. ನಾವು ಸಹ ಒಟ್ಟು ಕುಟುಂಬದ ಸದಸ್ಯರಲ್ಲ ಎಂದರೆ ಸರಿಯಲ್ಲ.

9. ಒಂದನೇ ಪ್ರತಿವಾದಿಗೆ ಕೆಲಸ ಮಾಡಲು ಸಾಧ್ಯವಾಗದ ಕಾರಣ, ಅವರ ಹಿಸ್ಸೆಗೆ ಪ್ರತಿಯಾಗಿ ರೂ.2,00,000 ನಗದನ್ನು ಪಡೆದುಕೊಂಡು ಅವರ ಹಿಸ್ಸೆಯ ಸ್ವತ್ತನ್ನು ಇತರರಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ರೂ.2,00,000 ಹಣ ಒಟ್ಟು

ಕುಟುಂಬದ ಹಣ ಎಂದರೆ ಸರಿ. ಸದರಿ ವಿಭಾಗ ಪತ್ರದಂತೆ ಇತರರೂ ಸಹ ಹಣವನ್ನು ಪಡೆದುಕೊಂಡ ತಮ್ಮ ಪಾಲಿನ ಹಿಸ್ಸೆಯನ್ನು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾವು ಮತ್ತು ನಮ್ಮ ತಾಯಿ 1 ನೇ ಪ್ರತಿವಾದಿಗೆ ಒಂದು ಲೋಟ ನೀರನ್ನು ಸಹ ನೀಡಿಲ್ಲ ಎಂದರೆ ಸಾಕ್ಷಿ ನಾವು ಚಿಕ್ಕವರಿದ್ದಾಗಲೇ ನಮ್ಮ ತಂದೆ ನಮ್ಮನ್ನು ಹೊರಗೆ ಹಾಕಿದ್ದು, ಹಾಗಾಗಿ ನಾವು ಹೇಗೆ ಕೊಡಲು ಸಾಧ್ಯ ಎಂದು ಹೇಳುತ್ತಾರೆ. ನನ್ನ ತಾಯಿಯ ತವರು ಮನೆ ಹೆಬ್ಬಳ್ಳಿ ಎಂದರೆ ಸರಿ. ನನ್ನ ತಾಯಿಯ ಅಣ್ಣನಿಗೆ 1 ನೇ ಪ್ರತಿವಾದಿಯ ತಂಗಿಯನ್ನು ಮದುವೆ ಮಾಡಿಕೊಂಡಿದ್ದು, ನನ್ನ ತಾಯಿಯನ್ನು 1 ನೇ ಪ್ರತಿವಾದಿಗೆ ಮದುವೆ ಮಾಡಿಕೊಟ್ಟಿದ್ದು, ಪರಸ್ಪರ ಕೊಟ್ಟು ತೆಗೆದುಕೊಂಡಿರುತ್ತಾರೆ ಎಂದರೆ ಸರಿ. ಯಶೋಧಮ್ಮರವರನ್ನು ನನ್ನ ತಾಯಿಯ ತವರು ಮನೆಯವರು 6 ನೇ ಪ್ರತಿವಾದಿ 6 ವರ್ಷದ ಮಗುವಿದ್ದಾಗಲೇ ಮನೆಯಿಂದ ಹೊರಗೆ ಹಾಕಿರುತ್ತಾರೆ ಎಂದರೆ ಗೊತ್ತಿಲ್ಲ.

10. ನನ್ನ ತಾಯಿಯ ತವರು ಮನೆಯ ಸ್ವತ್ತುಗಳು ಇವೆ ಎಂದರೆ ಸರಿ. ಯಶೋಧಮ್ಮರವರು ನನ್ನ ತಾಯಿಯ ತವರು ಮನೆಯಿಂದ ಭಾಗ ತೆಗೆದುಕೊಂಡಿಲ್ಲ ಎಂದರೆ ಸರಿ. ನಾವು ಕೂಡ ಇಲ್ಲಿಯವರೆಗೂ ಭಾಗ ತೆಗೆದುಕೊಂಡಿರಲಿಲ್ಲ ಎಂದು ಹೇಳುತ್ತಾರೆ. ನಮ್ಮ ಸಮಾಜದ ಮುಖಂಡರು ಮತ್ತು ಗುರುಗಳ ಸಮಕ್ಷಮದಲ್ಲಿ ನನ್ನ ತಾಯಿ 1 ನೇ ಪ್ರತಿವಾದಿಯ ಬಳಿ ವಿಭಾಗ ಕೇಳದಂತೆ ಹಾಗೂ 3 ನೇ ಪ್ರತಿವಾದಿ ನನ್ನ ತಾಯಿಯ ತವರು ಮನೆಯಲ್ಲಿ ವಿಭಾಗ ಕೇಳದಂತೆ ನಿರ್ಣಯ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ಮೇಲ್ಕಂಡ ಸಂಗತಿಯನ್ನು ಮರೆಮಾಚಿ ಈ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿಯಲ್ಲ. ನಿಪಿಃ 14 ರಲ್ಲಿ ಕಚೇರಿ ಉಪಯೋಗಕ್ಕಾಗಿ ಮಾತ್ರ ಎಂದು ನಮೂದು ಇದೆ ಎಂದರೆ ಸರಿ. ನಿಪಿಃ 14 ರ ಸ್ವತ್ತು ನನ್ನ ಅಜ್ಜನಾದ ಸಿದ್ದಪ್ಪ ರವರಿಂದ ನನ್ನ ತಂದೆಯಾದ ಜಯಪ್ಪರವರಿಗೆ ಬಂದಿರುವ ಬಗ್ಗೆ ನಿಪಿಃ 14 ನ್ನು ಹೊರತುಪಡಿಸಿ ಇತರೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನಿಪಿಃ 14 ರ ಸ್ವತ್ತು ನನ್ನ ಅಜ್ಜನಿಗೆ ಸೇರಿದ ಸ್ವತ್ತು ಅಲ್ಲ ಎಂದರೆ ಸರಿಯಲ್ಲ.

11. ನಿಪಿಃ 14 ರ ಸ್ವತ್ತು ನನ್ನ ತಾತನಿಗೆ ಸೇರಿದ ಸ್ವತ್ತು ಅಲ್ಲ, ಹಾಗಾಗಿ ಆ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿಃ 2 ರಲ್ಲಿ ನಿಪಿಃ 14 ರ ಸ್ವತ್ತಿನ ಕುರಿತು ಉಲ್ಲೇಖ ಇಲ್ಲ ಎಂದರೆ ಸರಿ. ದಾವಾ ಅನುಸೂಚಿತ 1 ಕಂಡಿಕೆ ಸ್ವತ್ತಿಗೂ ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿಃ 1 ರ ಕ್ರಯ ಪತ್ರದ ಕುರಿತು ಪ್ರಶ್ನಿಸಲು ನಮಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾವು ದಾವೆಯಲ್ಲಿ ಕೋರಿರುವ ಬಗ್ಗೆ ಯಾವುದೇ ಪರಿಹಾರವನ್ನು ಪಡೆಯಲು ಬರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ